**ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು**

**ಸಿ.ಸಿ.ನಂ. 751 / 2021**

**ದಿನಾಂಕಃ 16-05-2025**

ಪಿರ್ಯಾದಿ ಃ- ಅರಕಲಗೂಡು ಪೊಲೀಸ್,

ಃಃ ವಿರುದ್ಧ ಃಃ

ಆರೋಪಿಗಳು : 1. ಕೇಶವ ಬಿನ್ ಲೇಟ್ ಸಣ್ಣಯ್ಯ,50 ವರ್ಷ,
2. ಸರೋಜ ಉ ಸರೋಜಮ್ಮ ಕೋಂ ಕೇಶವ, 40 ವರ್ಷ,
3. ಕೇಶವ ಬಿನ್ ಅಣ್ಣಯ್ಯ, 35 ವರ್ಷ,
4. ಸುನಿತ ಕೋಂ ಕೇಶವ, 30 ವರ್ಷ,
ಎಲ್ಲಾ ಆರೋಪಿತರ ವಾಸಃ
ಮರಡಿ ಗ್ರಾಮ, ಕಸಬಾ ಹೋಬಳಿ,
ಅರಕಲಗೂಡು ತಾಲ್ಲೂಕು

**ದಂ.ಪ್ರ.ಸಂ.ಕಲಂಃ 313ರ ಅನ್ವಯ ಆರೋಪಿಯ ವಿಚಾರಣೆ**

**ಪ್ರ-1.** ನೀವು ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿದ್ದೀರಾ ?

**1ನೇ ಆರೋಪಿಯ ಉತ್ತರ:-**
**2ನೇ ಆರೋಪಿಯ ಉತ್ತರ:-**
**3ನೇ ಆರೋಪಿಯ ಉತ್ತರ:-**
**4ನೇ ಆರೋಪಿಯ ಉತ್ತರ:-**

**ಪ್ರ-2. ಫ್ರಾಸಾ-1 ನಾಗರಾಜ ರವರು ಸಾಕ್ಷ್ಯ ನುಡಿಯುತ್ತಾ** ಚಾಸಾ 2 ನನ್ನ ತಾಯಿ, ಚಾಸಾ 3 ನನ್ನ ಊರಿನವರು. ಆರೋಪಿತರು ನನಗೆ ಗೊತ್ತು. ದಿನಾಂಕ 14.04.2021 ರಂದು ರಾತ್ರಿ ಸುಮಾರು 8.00 ಗಂಟೆ ಸಮಯದಲ್ಲಿ ಚಾಸಾ 2 ರವರು ಮನೆಯ ಖಾತೆಗೆ ಸಹಿ ಮಾಡಲಿಲ್ಲ ಎಂದು ಆರೋಪಿತರು ಚಾಸಾ 2 ರವರನ್ನು ಮನೆ ಬಿಟ್ಟು ಹೋಗುವಂತೆ ಹೇಳಿ ಪಾತ್ರೆ, ಬಟ್ಟೆಗಳನ್ನು ಮನೆಯಿಂದ ತೆಗೆದು ಹೊರಗೆ ಬಿಸಾಡಿದರು ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ:-**
**2ನೇ ಆರೋಪಿಯ ಉತ್ತರ:-**
**3ನೇ ಆರೋಪಿಯ ಉತ್ತರ:-**
**4ನೇ ಆರೋಪಿಯ ಉತ್ತರ:-**

**ಪ್ರ-3. ಫ್ರಾಸಾ-1ರವರು ಮುಂದುವರಿದು** ಚಾಸಾ 2 ರವರು ಹೋಗುವಾಗ 1ನೇ ಹಾಗೂ 2ನೇ ಆರೋಪಿತರು ಅವರ ಕುತ್ತಿಗೆ ಹಿಡಿದು ಮೇಲಕ್ಕೆ ಎತ್ತಿದರು. ಆಗ ನಾನು ಪ್ರಶ್ನೆ ಮಾಡಿದಾಗ ಆರೋಪಿತರೆಲ್ಲರೂ ನನ್ನನ್ನು ಕೆಳಕ್ಕೆ ಕೆಡವಿ ದೊಣ್ಣೆ, ರಾಡು ಮತ್ತು ಕಲ್ಲುಗಳಿಂದ ನನ್ನ ಸೊಂಟಕ್ಕೆ ಕಾಲಿಗೆ ಹೊಡೆದರು. 1ನೇ ಹಾಗೂ 3ನೇ ಆರೋಪಿ ದೊಣ್ಣೆಯಿಂದ ನನ್ನ ಎಡಕಾಲಿಗೆ ಹೊಡೆದರು, ಕಲ್ಲಿನಿಂದ ಮೈಕೈಗೆ, ಸೊಂಟಕ್ಕೆ ಹೊಡೆದರು. ಚಾಸಾ 2 ಮತ್ತು 3 ರವರು ಬಿಡಿಸಲು ಬಂದಾಗ ಚಾಸಾ 3 ರವರಿಗೆ ಏಟಾಯಿತು. ಆರೋಪಿತರು ನನಗೆ ಹಾಗೂ ಚಾಸಾ 3 ರವರಿಗೆ ಅವಾಚ್ಯ ಶಬ್ದಗಳಲ್ಲಿ ಅವಮಾನವಾಗುವಂತೆ ಬೈದರು. ಆರೋಪಿತರು ರಾಡ್ ನಿಂದ ಚಾಸಾ 3 ರವರಿಗೆ ತಲೆಗೆ ಹೊಡೆದರು. ಜಗಳದ ಸಮಯದಲ್ಲಿ ನನ್ನದೊಂದು ಬೆಳ್ಳಿಯ ಚೈನ್ ಮತ್ತು 12 ಗ್ರಾಂ. ತೂಕದ ಚಿನ್ನದ ಚೈನ್ ನ್ನು ಆರೋಪಿತರು ಕಿತ್ತುಕೊಂಡಿರುತ್ತಾರೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ:-**
**2ನೇ ಆರೋಪಿಯ ಉತ್ತರ:-**
**3ನೇ ಆರೋಪಿಯ ಉತ್ತರ:-**
**4ನೇ ಆರೋಪಿಯ ಉತ್ತರ:-**

**ಪ್ರ-4. ಫ್ರಾಸಾ-1ರವರು ಮುಂದುವರಿದು** ನಂತರ ಚಾಸಾ 4 ಮತ್ತು 5 ರವರು ನನ್ನನ್ನು ಅರಕಲಗೂಡು ಆಸ್ಪತ್ರೆಗೆ ಕರೆದುಕೊಂಡು ಹೋದರು. ಪೊಲೀಸರು ಆಸ್ಪತ್ರೆಗೆ ಬಂದರು. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆ. ಪೊಲೀಸರು ಮಾರನೇ ದಿನದಂದು ನನಗೆ ಪೊಲೀಸ್ ಠಾಣೆಗೆ ಕರೆದರು. ನಮ್ಮನ್ನು ವಿಚಾರಿಸಿದರು. ರಾಜಿ ಮಾಡಲು ಪ್ರಯತ್ನಿಸಿದರು. ನಾನು ಆಗ ಮನೆಗೆ ವಾಪಸ್ ಹೋಗಿ ದಿನಾಂಕ 20.04.2021 ರಂದು ಹಾಸನ ಜಿಲ್ಲಾ ವರಿಷ್ಠಾಧಿಕಾರಿಗಳ ಕಚೇರಿಗೆ ಹೋಗಿ ದೂರು ನೀಡಿದ ಬಗ್ಗೆ ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ:-**
**2ನೇ ಆರೋಪಿಯ ಉತ್ತರ:-**
**3ನೇ ಆರೋಪಿಯ ಉತ್ತರ:-**
**4ನೇ ಆರೋಪಿಯ ಉತ್ತರ:-**

**ಪ್ರ-5. ಫ್ರಾಸಾ-1ರವರು ಮುಂದುವರಿದು** ವರಿಷ್ಟಧಿಕಾರಿಗಳ ಕಚೇರಿಯಲ್ಲಿ ನನ್ನನ್ನು ಅರಕಲಗೂಡು ಪೊಲೀಸ್ ಠಾಣೆಗೆ ಹೋಗಲು ತಿಳಿಸಿದರು. ನಂತರ ಪೊಲೀಸರೇ ಮನೆಯ ಹತ್ತಿರ ಬಂದರು. ಆಗ ನಾನು ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರು ನೀಡಿ, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿ , ನಂತರ ಅದೇ ದಿನ ಸ್ಥಳ ಮಹಜರ್ ಮಾಡಲು ಮರಡಿ ಗ್ರಾಮಕ್ಕೆ ನಮ್ಮ

ಮನೆಯ ಹತ್ತಿರ ಗಲಾಟೆಯಾದ ಜಾಗದ ಹತ್ತಿರ ಬಂದು ವಿಚಾರಣೆ ಮಾಡಿ ಒಂದು ದೊಣ್ಣೆ , ರಾಡ್ ಮತ್ತು ಕಲ್ಲು ಇವುಗಳನ್ನು ಆರೋಪಿತರು ಹಲ್ಲೆ ಮಾಡಲು ಬಳಸಿದ ಕಾರಣ ನಾನು ತೆಗೆದು ಇಟ್ಟಿದ್ದನ್ನು ಪೊಲೀಸರಿಗೆ ಹಾಜರುಪಡಿಸಿ ಬಗ್ಗೆ ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ**:–

**2ನೇ ಆರೋಪಿಯ ಉತ್ತರ**:–

**3ನೇ ಆರೋಪಿಯ ಉತ್ತರ**:–

**4ನೇ ಆರೋಪಿಯ ಉತ್ತರ**:–

**ಪ್ರ–6. ಫ್ರಾಸಾ–1ರವರು ಮುಂದುವರಿದು** ಮಹಜರ್ ಕಾಲದಲ್ಲಿ ನನ್ನ ಹೆಂಡತಿ ಚಾಸಾ 6 ಹಾಗೂ ಚಾಸಾ 4 ರವರು ಹಾಜರಿದ್ದರು. ಸದರಿ ವಸ್ತುಗಳನ್ನು ಪೊಲೀಸರು ನಮ್ಮ ಸಮಕ್ಷಮ ವಶಕ್ಕೆ ಪಡೆದರು. ಮಹಜರ್ ಕ್ರಮವನ್ನು ಮಧ್ಯಾಹ್ನ ಸಮಯದಲ್ಲಿ ಮಾಡಿರುತ್ತಾರೆ. ಕೃತ್ಯ ಸ್ಥಳ ಮತ್ತು ಅಮಾನತು ಮಹಜರನ್ನು ತೋರಿಸಲಾಗಿ ಅದರ ಮೇಲಿನ ತಮ್ಮ ಸಹಿಯನ್ನು ಗುರುತಿಸಿದ ಕಾರಣ ಸದರಿ ಕೃತ್ಯ ಸ್ಥಳ ಮತ್ತು ಅಮಾನತ್ ಮಹಜರನ್ನು ಗುರುತಿಸಿ,ನ್ಯಾಯಾಲಯದ ಮುಂದೆ ಇರುವ ಒಂದು ದೊಣ್ಣೆ, ರಾಡ್ ಮತ್ತು ಕಲ್ಲನ್ನು ಗುರುತಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ**:–

**2ನೇ ಆರೋಪಿಯ ಉತ್ತರ**:–

**3ನೇ ಆರೋಪಿಯ ಉತ್ತರ**:–

**4ನೇ ಆರೋಪಿಯ ಉತ್ತರ**:–

**ಪ್ರ–7. ಫ್ರಾಸಾ–2 ಜಯಮ್ಮ ಬಿನ್ ಅಣ್ಣಯ್ಯರವರು ಸಾಕ್ಷ್ಯ ನುಡಿಯುತ್ತಾ** ಚಾಸಾ 1 ನನ್ನ ಮಗ, ಚಾಸಾ 3 ನನ್ನ ಪಕ್ಕದ ಮನೆಯವರು. 3ನೇ ಆರೋಪಿ ನನ್ನ ಮಗ, 4ನೇ ಆರೋಪಿ ನನ್ನ ಸೊಸೆ , 1 ಹಾಗೂ 2ನೇ ಅರೋಪಿತರು ನನ್ನ ಬೀಗರು. ಸುಮಾರು 2 ವರ್ಷಗಳ ಹಿಂದೆ ರಾತ್ರಿ 8 ಗಂಟೆ ಸಮಯದಲ್ಲಿ 3 ನೇ ಆರೋಪಿಯು ಜಮೀನು ಹಾಗೂ ಮನೆ ವಿಚಾರವಾಗಿ ನಾನು ಸಹಿ ಮಾಡುವಂತೆ ಕೇಳಿದಾಗ ನನ್ನ ಹೆಸರಿನಲ್ಲಿ ಏನು ಇಲ್ಲ ಎಂದು ಹೇಳಿದೆ. ಆಗ ನಾನು ಅಲ್ಲಿಂದ ಬರುತ್ತಿದ್ದೆ , ಆಗ 1ನೇ ಆರೋಪಿ ನನ್ನನ್ನು ಹಿಡಿದುಕೊಂಡು ಹೊಡೆಯಲು ಆರಂಬಿಸಿದ. ಆಗ ನನ್ನ ಹಿರಿಯ ಮಗನಾದ ಚಾಸಾ 1 ಬಂದು ಅವರನ್ನು ಪ್ರಶ್ನಿಸಿದರು. 1ನೇ ಆರೋಪಿ ನನ್ನ ಕತ್ತು ಹಿಸುಕಿದರು, 2ನೇ ಆರೋಪಿ ನನ್ನ ಬೆನ್ನಿಗೆ ಹೊಡೆದರು. 1ನೇ ಆರೋಪಿ ನನ್ನ ಬೆನ್ನಿಗೆ ದೊಣ್ಣೆಯಿಂದ ನನ್ನ ಎಡಭುಜಕ್ಕೆ ಹೊಡೆದರು. ಚಾಸಾ 1 ರವರಿಗೂ ಸಹ ಆರೋಪಿತರೆಲ್ಲರೂ ಹೊಡೆದರು. ಚಾಸಾ 1ರವರಿಗೆ 1ನೇ ಆರೋಪಿ ಸೊಂಟಕ್ಕೆ ದೊಣ್ಣೆಯಿಂದ ಹೊಡೆದರು. 2ನೇ ಆರೋಪಿ ರಾಡಿನಿಂದ ಚಾಸಾ 1 ರವರ ಸೊಂಟಕ್ಕೆ ಹೊಡೆದರು.

2ನೇ ಆರೋಪಿ ಚಾಸಾ 1 ರವರಿಗೆ ಕಲ್ಲಿನಿಂದ ಸೊಂಟಕ್ಕೆ ಹೊಡೆದರು. ನಂತರ ಚಾಸಾ 3 ರವರು ಜಗಳ ಬಿಡಿಸಲು ಬಂದರು. ಆಗ 2ನೇ ಆರೋಪಿ ಚಾಸಾ 3 ರವರಿಗೆ ರಾಡ್ ನಿಂದ ತಲೆಯ ಮಧ್ಯಭಾಗಕ್ಕೆ ಹೊಡೆದರು. ನಂತರ ನಮ್ಮನ್ನು ಚಾಸಾ 5 ರವರು ಹಾಗೂ ಇನ್ನೊಬ್ಬರು ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ:–**
**2ನೇ ಆರೋಪಿಯ ಉತ್ತರ:–**
**3ನೇ ಆರೋಪಿಯ ಉತ್ತರ:–**
**4ನೇ ಆರೋಪಿಯ ಉತ್ತರ:–**

**ಪ್ರ–8. ಪ್ರಾಸಾ–3 ರೇಖಾ ಕೋಂ ಅಣ್ಣಪ್ಪ ರವರು ಸಾಕ್ಷ್ಯ ನುಡಿಯುತ್ತಾ** ಚಾಸಾ –1 ಮತ್ತು 2 ನನ್ನ ಊರಿನವರು. ಆರೋಪಿತರು ನನ್ನ ಊರಿನವರು. ಸುಮಾರು 3 ವರ್ಷಗಳ ಹಿಂದೆ 1 ಹಾಗೂ 2ನೇ ಅರೋಪಿತರು ಚಾಸಾ 1 ರವರಿಗೆ ಕೆಳಕ್ಕೆ ಹಾಕಿ ತುಳಿಯುತ್ತಿದ್ದರು. ಆಗ ಚಾಸಾ 1 ರವರ ಮಕ್ಕಳು ಅಳುತ್ತಾ ಇದ್ದವು. ನಾನು ಬಿಡಿಸಲು ಹೋದಾಗ 1 ಮತ್ತು 2ನೇ ಅರೋಪಿತರು ರಾಡ್ ನಿಂದ ನನ್ನ ತಲೆಯ ಮಧ್ಯಭಾಗಕ್ಕೆ ಹೊಡೆದರು. ಆಗ ನಾನು ಜ್ಞಾನ ತಪ್ಪಿ ಬಿದ್ದು ಹೋದೆ . ಚಾಸಾ 1 ರವರು ನನಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು. ಈಗ ನ್ಯಾಯಾಲಯದ ಮುಂದೆ ಇರುವ ಎಂ ಓ 2 ರಾಡ್ ಸದರಿ ದಿನದಂದು ಆರೋಪಿತರು ನನಗೆ ಹೊಡೆಯಲು ಬಳಸಿದ ರಾಡ್ ಆಗಿರುತ್ತದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ:–**
**2ನೇ ಆರೋಪಿಯ ಉತ್ತರ:–**
**3ನೇ ಆರೋಪಿಯ ಉತ್ತರ:–**
**4ನೇ ಆರೋಪಿಯ ಉತ್ತರ:–**

**ಪ್ರ–9. ಪ್ರಾಸಾ–4 ಅಣ್ಣಪ್ಪ ಬಿನ್ ರಂಗಯ್ಯ ರವರು ಸಾಕ್ಷ್ಯ ನುಡಿಯುತ್ತಾ** ಚಾಸಾ –1 ನನ್ನ ಅಣ್ಣ , ಚಾಸಾ 2 ನನ್ನ ಚಿಕ್ಕಮ್ಮ. ಅರೋಪಿತರನ್ನು ನಾನು ನೋಡಿರುತ್ತೇನೆ. ಸುಮಾರು 3 ವರ್ಷಗಳ ಹಿಂದೆ ನಾನು ಗಾರೆ ಕೆಲಸಕ್ಕೆ 1ನೇ ಆರೋಪಿ ಜೊತೆ ಹೋಗಿ ರಾತ್ರಿ 9.00 ಗಂಟೆಗೆ ಇಬ್ಬರೂ ವಾಪಸ್ ಮನೆಗೆ ಬಂದೆವು. ಆ ಸಮಯದಲ್ಲಿ ಮನೆಯ ಹತ್ತಿರ ಕೇಶವರವರ ಹೆಂಡತಿ ಸುನೀತಾ ರವರು ಚಾಸಾ 2 ರವರನ್ನು ಹೊಡೆಯುತ್ತಿದ್ದರು. ಚಾಸಾ 1 ರವರು ನಿಂತಿದ್ದರು . ಆರೋಪಿತರು ಚಾಸಾ 3 ರವರಿಗೆ ರಾಡ್ ನಿಂದ ತಲೆಗೆ ಹೊಡೆದರು, ಆಗ ನಾನು ಆಟೋದಲ್ಲಿ ಚಾಸಾ 1 ಮತ್ತು 3 ರವರನ್ನು ಅರಕಲಗೂಡಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆ. ಆಗ ನಾನು ಹಾಗೂ ಚಾಸಾ 1, 5 ಹಾಗೂ ನಾನು ಅರಕಲಗೂಡು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದು, ಆರೋಪಿತರು ನನಗೆ, ಚಾಸಾ 1

ಮತ್ತು 5 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ದೊಣ್ಣೆ , ಕಬ್ಬಿಣದ ರಾಡು ಹಾಗೂ ಕಲ್ಲು ಸದರಿ ದಿನದಂದು ಆರೋಪಿತರು ಹಲ್ಲೆಗೆ ಬಳಸಿದ ವಸ್ತುಗಳಾಗಿರುತ್ತವೆ. ಮಹಜರ್ ನಲ್ಲಿರುವ ಸಹಿಯನ್ನು ಗುರುತಿಸಿದ್ದು, ಮದ್ಯಾಹ್ನ 3 ಗಂಟೆಯಿಂದ 4.30 ರವರೆಗೆ ಪೊಲೀಸರು ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ**:–

**2ನೇ ಆರೋಪಿಯ ಉತ್ತರ**:–

**3ನೇ ಆರೋಪಿಯ ಉತ್ತರ**:–

**4ನೇ ಆರೋಪಿಯ ಉತ್ತರ**:–

**ಪ್ರ–10. ಫ್ರಾಸಾ–5 ಧರ್ಮ ಬಿನ್ ದೇವಯ್ಯರವರು ಸಾಕ್ಷ್ಯ ನುಡಿಯುತ್ತಾ** ಚಾಸಾ 1 ನನ್ನ ದೊಡ್ಡಪ್ಪನ ಮಗ, ಚಾಸಾ 2 ನನ್ನ ದೊಡ್ಡಮ್ಮ, ಚಾಸಾ 3 ಪಕ್ಕದ ಮನೆಯವರು. ಆರೋಪಿತರು ನನ್ನ ಸಂಬಂಧಿಕರು. ಈಗ್ಗೆ 1 ವರ್ಷದ ಹಿಂದೆ ನಾನು ರಾತ್ರಿ 9 ಗಂಟೆ ಸಮಯದಲ್ಲಿ ನನ್ನ ಮನೆಯಲ್ಲಿ ಇದ್ದಾಗ ನಮ್ಮ ಊರಿನವರು ನನಗೆ ಫೋನ್ ಮಾಡಿ 3ನೇ ಆರೋಪಿ ಹಾಗೂ ಚಾಸಾ 1 ರವರು ಹಾಗೂ ಅಣ್ಣತಮ್ಮಂದಿರು ಜಗಳ ಮಾಡುತ್ತಿದ್ದಾರೆ ಎಂದು ತಿಳಿಸಿದರು. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಜಗಳ ನಿಂತಿತ್ತು. ಚಾಸಾ 1 ರವರಿಗೆ ಹೊಡೆದಿದ್ದರು, ನಾನು ಚಾಸಾ 1 ರಿಂದ 3 ರವರನ್ನು ಅರಕಲಗೂಡಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋದೆ. ನಂತರ ಚಾಸಾ 1 ರಿಂದ 3 ರವರು ದೂರು ಕೊಟ್ಟಿರುತ್ತಾರೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ**:–

**2ನೇ ಆರೋಪಿಯ ಉತ್ತರ**:–

**3ನೇ ಆರೋಪಿಯ ಉತ್ತರ**:–

**4ನೇ ಆರೋಪಿಯ ಉತ್ತರ**:–

**ಪ್ರ–11. ಫ್ರಾಸಾ–6 ಸವಿತಾ ಕೋಂ ನಾಗರಾಜು** ರವರು ಸಾಕ್ಷ್ಯನುಡಿಯುತ್ತಾ ಚಾಸಾ 1 ನನ್ನ ಗಂಡ, ಚಾಸಾ 2 ನನ್ನ ಅತ್ತೆ, ಚಾಸಾ 3 ನನ್ನ ಪಕ್ಕದ ಮನೆಯವರು. 3ನೇ ಆರೋಪಿ ನನ್ನ ಮೈದುನ, ಉಳಿದ ಆರೋಪಿತರು ನನ್ನ ಊರಿನವರು. ಸುಮಾರು 3 ವರ್ಷಗಳ ಹಿಂದೆ 3 ಮತ್ತು 4ನೇ ಅರೋಪಿತರು ಚಾಸಾ 2 ರವರನ್ನು ಹೊಡೆಯುತ್ತಿದ್ದರು. ಆಗ ಚಾಸಾ 1 ರವರು ಚಾಸಾ 2 ರವರಿಗೆ ಪೊಲೀಸ್ ಠಾಣಗೆ ಹೋಗಿ ದೂರು ನೀಡುವಂತೆ ಹೇಳಿದರು. ಚಾಸಾ 2ರವರು ದೂರು ಕೊಡಲೆಂದು ಹೋಗುತ್ತಿದ್ದರು. ಆಗ 1 ಮತ್ತು 2ನೇ ಆರೋಪಿತರು ಚಾಸಾ 2 ರವರನ್ನು ಹಿಡಿದು ಹೊಡೆಯುತ್ತಿದ್ದರು, ಚಾಸಾ 1 ರವರು ಏಕೆ ಹೊಡೆಯುತ್ತಿರುವಿರಿ ಎಂದು ಕೇಳಿದಾಗ ಆರೋಪಿತರೆಲ್ಲರೂ ಸೇರಿ ಚಾಸಾ 1 ರವರಿಗೆ ಹೊಡೆದರು. ಆಗ ನಾನೂ ಸಹ ಕಿರುಚಿಕೊಂಡು ಹೋದಾಗ ಆರೋಪಿತರು ನನಗೂ ಸಹ ಹೊಡೆದರು. ಆಗ ಪಕ್ಕದ

ಮನೆಯ ಚಾಸಾ 3 ರವರು ಜಗಳ ಬಿಡಿಸಲು ಬಂದಾಗ ಆರೋಪಿತರು ಅವರಿಗೆ ರಾಡ್ ನಿಂದ ತಲೆಗೆ ಹೊಡೆದರು. ಆರೋಪಿತರೆಲ್ಲರೂ ಸೇರಿ ಕಲ್ಲಿನಿಂದ ರಾಡ್ ನಿಂದ ಹಾಗೂ ದೊಣ್ಣೆಯಿಂದ ಚಾಸಾ 1 , 3 ಮತ್ತು ನನಗೆ ಹೊಡೆದರು. ಚಾಸಾ 3 ರವರಿಗೆ ಗಾಯವಾಗಿ ತಲೆಯಿಂದ ರಕ್ತ ಬರುತ್ತಿತ್ತು. ಆಗ ಚಾಸಾ 4 ರವರು ಕೆಲಸದಿಂದ ಬಂದರು ಹಾಗೂ ಆಟೋಗೆ ಫೋನ್ ಮಾಡಿ ಚಾಸಾ 1 ರಿಂದ 3 ರವರನ್ನು ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋದರು. ಪೊಲೀಸರು ಆಸ್ಪತ್ರೆಗೆ ಬಂದು ನೋಡಿಕೊಂಡು ಹೋಗಿ ದೂರು ಕೊಡಬೇಕೆಂದು ಹೇಳಿ ಹೋದರು. ಚಾಸಾ 1 ರವರು ದೂರು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ:–**
**2ನೇ ಆರೋಪಿಯ ಉತ್ತರ:–**
**3ನೇ ಆರೋಪಿಯ ಉತ್ತರ:–**
**4ನೇ ಆರೋಪಿಯ ಉತ್ತರ:–**

**ಪ್ರ–12. ಪ್ರಾಸಾ–6ರವರು ಮುಂದುವರಿದು** ನಂತರ ಪೊಲೀಸರು ಮರಡಿ ಗ್ರಾಮಕ್ಕೆ ಮಹಜರ್ ಕ್ರಮ ಜರುಗಿಸಲು ಬಂದಿದ್ದರು. ಕೃತ್ಯ ಸ್ಥಳವನ್ನು ನೋಡಿ ಸ್ಥಳ ಮಹಜರ್ ಕ್ರಮ ಜರುಗಿಸಿ ಕಲ್ಲು , ದೊಣ್ಣೆ ಮತ್ತು ರಾಡನ್ನು ಅಮಾನತುಪಡಿಸಿಕೊಂಡರು. ಸದರಿ ಮಹಜರನ್ನು ಮದ್ಯಾಹ್ನ 3.00 ರಿಂದ 3.45 ಗಂಟೆಯವರೆಗೆ ಬರೆದಿರುತ್ತಾರೆ. ನನ್ನ ಜೊತೆ ನಿಪಿ 2 ಮಹಜರ್ ಗೆ ಚಾಸಾ 1 ಮತ್ತು 4 ರವರು ಸಹಿ ಮಾಡಿರುತ್ತಾರೆ. ಆರೋಪಿತರು ಹಲ್ಲೆಗೆ ಬಳಸಿದ ಕಲ್ಲು, ರಾಡು ಮತ್ತು ದೊಣ್ಣೆಗಳು ನ್ಯಾಯಾಲಯದ ಮುಂದಿರುವ ವಸ್ತುಗಳಾಗಿರುತ್ತವೆ. ಮಹಜರ್ ನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ:–**
**2ನೇ ಆರೋಪಿಯ ಉತ್ತರ:–**
**3ನೇ ಆರೋಪಿಯ ಉತ್ತರ:–**
**4ನೇ ಆರೋಪಿಯ ಉತ್ತರ:–**

**ಪ್ರ–13. ಪ್ರಾಸಾ–7 ಡಾಃ ರವಿಶಂಕರ್ ಬಿ.ಎಂ. ಬಿನ್ ಎಂ.ಬಿ. ಮಂಜುನಾಥ ರವರು ಸಾಕ್ಷ್ಯ ನುಡಿಯುತ್ತಾ ದಿನಾಂಕಃ** 15.04.2021 ರಂದು ನಾಗರಾಜು, ರೇಖಾ ಮತ್ತು ಜಯಮ್ಮ ಎಂಬುವರು ನನ್ನ ಬಳಿ ರಾತ್ರಿ 8.00 ಗಂಟೆಗೆ ಬಂದಿರುತ್ತಾರೆ. ಅವರಿಗೆ ಹೊಡೆದ ಸಂಬಂದ ಸದರಿ ವ್ಯಕ್ತಿಗಳು ನನ್ನ ಬಳಿ ಬಂದಿರುತ್ತಾರೆ. ಅವರುಗಳನ್ನು ಪರೀಕ್ಷಿಸಿದ್ದು ಜಯಮ್ಮರವರಿಗೆ ಕತ್ತಿನ ಹಿಂಭಾಗ ಮತ್ತು ಎಡಭುಜಕ್ಕೆ ಪೆಟ್ಟು

ಬಿದ್ದಿದ್ದು ಕಂಡುಬಂದಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ:–**

**2ನೇ ಆರೋಪಿಯ ಉತ್ತರ:–**

**3ನೇ ಆರೋಪಿಯ ಉತ್ತರ:–**

**4ನೇ ಆರೋಪಿಯ ಉತ್ತರ:–**

**ಪ್ರ–14.ಫ್ರಾಸಾ–7ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ** ರೇಖಾರವರನ್ನು ಪರೀಕ್ಷಿಸಿದ್ದು ಅವರ ತಲೆಯ ಎಡಭಾಗದಲ್ಲಿ ಚಿಕ್ಕ ಗಾಯ 1 ಇಂಟು 1 ಸೆಂ ಮೀ (ಓಪನ್ ವುಂಡ್) ಆಗಿರುತ್ತದೆ. ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ನಾಗರಾಜು ರವರನ್ನು ಪರೀಕ್ಷಿಸಿದ್ದು ಅವರ ಎದೆಯ ಮುಂಭಾಗವನ್ನು ಒತ್ತಿದಾಗ ಅವರಿಗೆ ನೋವು ಇರುವುದನ್ನು ಕಂಡುಬಂದಿರುತ್ತದೆ ಮತ್ತು ಎಡಕಾಲಿನ ಮಧ್ಯದಲ್ಲಿ 1 ಇಂಟು 1 ಸೆಂ ಮೀ ನ ಗಾಯವೊಂದು ಕಂಡುಬಂದಿರುತ್ತದೆ ಮತ್ತು ಆ ಜಾಗದಲ್ಲಿ ಊತ ಕಂಡುಬಂದಿರುತ್ತದೆ. ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ:–**

**2ನೇ ಆರೋಪಿಯ ಉತ್ತರ:–**

**3ನೇ ಆರೋಪಿಯ ಉತ್ತರ:–**

**4ನೇ ಆರೋಪಿಯ ಉತ್ತರ:–**

**ಪ್ರ–15.ಫ್ರಾಸಾ–7ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ** ದಿನಾಂಕ 22.04.2021 ರಂದು ನಾಗರಾಜು ಬಿನ್ ಅಣ್ಣಯ್ಯ ರವರ ಗಾಯದ ಪ್ರಮಾಣಪತ್ರವನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ದಿನಾಂಕ 22.04.2021 ರಂದು ಜಯಮ್ಮ ರವರ ಗಾಯದ ಪ್ರಮಾಣಪತ್ರವನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ದಿನಾಂಕ 22.04.2021 ರಂದು ರೇಖಾ ರವರ ಗಾಯದ ಪ್ರಮಾಣಪತ್ರವನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಬಗ್ಗೆ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ:–**

**2ನೇ ಆರೋಪಿಯ ಉತ್ತರ:–**

**3ನೇ ಆರೋಪಿಯ ಉತ್ತರ:–**

**4ನೇ ಆರೋಪಿಯ ಉತ್ತರ:–**

**ಪ್ರ-16. ಫ್ರಾಸಾ-8 ರಂಗೇಗೌಡ ರವರು ಸಾಕ್ಷ್ಯ ನುಡಿಯುತ್ತಾ** ದಿನಾಂಕ 20.04.2021 ರಂದು ನಾನು ಠಣಾ ಎಸ್ ಹೆಚ್ ಓ ಕರ್ತವ್ಯದಲ್ಲಿದ್ದಾಗ ಪಿರ್ಯಾದಿಯು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು ಠಾಣಾ ಮೊಕದ್ದಮ್ಮೆ 112/2021 , ಕಲಂ 323, 504, 354 , 324 , 506 ಐಪಿಸಿ ರಡಿ ರೆಡ್ ವಿತ್ 34 ಐಪಿಸಿ ರಡಿಯಲ್ಲಿ ಪ್ರಕರಣ ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿಯನ್ನು ನಿವೇದಿಸಿಕೊಂಡು, ಅದೇ ದಿನ ಮದ್ಯಾಹ್ನ ಕೃತ್ಯ ಸ್ಥಳಕ್ಕೆ ಬೇಟಿ ನೀಡಿ ಮಧ್ಯಾಹ್ನ 3.00 ರಿಂದ 3.45 ಗಂಟೆಯವರೆಗೆ ಕೃತ್ಯ ಸ್ಥಳ ಮಹಜರ್ ಮಾಡಿ, ಕೃತ್ಯ ಸ್ಥಳದಲ್ಲಿ ಒಂದು ಕಬ್ಬಿಣದ ರಾಡ್, ಒಂದು ಮರದ ದೊಣ್ಣೆ, ಒಂದು ಕಲ್ಲು ಅಮಾನತುಪಡಿಸಿಕೊಂಡು ನ್ಯಾಯಾಲಯದ ಅನುಮತಿಗಾಗಿ ಸ್ವತ್ತಿನ ಪಟ್ಟಿ ಸಂಖ್ಯೆಯಲ್ಲಿ ನಮೂದಿಸಿಕೊಂಡು ನ್ಯಾಯಾಲಯದ ಅನುಮತಿ ಪಡೆದುಕೊಂಡ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ:-**

**2ನೇ ಆರೋಪಿಯ ಉತ್ತರ:-**

**3ನೇ ಆರೋಪಿಯ ಉತ್ತರ:-**

**4ನೇ ಆರೋಪಿಯ ಉತ್ತರ:-**

**ಪ್ರ-17. ಫ್ರಾಸಾ-7ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ** ಅದೇ ದಿನ ನಾಗರಾಜು , ಜಯಮ್ಮ , ರೇಖಾ , ಅಣ್ಣಪ್ಪ , ಧರ್ಮ ರವರ ಹೇಳಿಕೆಯನ್ನು ದಾಖಲಿಸಿ, ನಂತರ ದಿನಾಂಕ 05.06.2021 ರಂದು ಗಾಯಾಳುಗಳಾದ ನಾಗರಾಜು , ಜಯಮ್ಮ , ರೇಖಾ ರವರ ಗಾಯದ ದೃಡೀಕರಣ ಪತ್ರವನ್ನು ಪಡೆದು ನಂತರ ಈ ಪ್ರಕರಣದಲ್ಲಿ ತನಿಖೆ ಮುಗಿದಿದ್ದರಿಂದ ದಿನಾಂಕ 07.06.2021 ರಂದು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ಬಗ್ಗೆ ಹಾಗೂ ದೂರಿನಲ್ಲಿ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ದಿನಾಂಕ 20.04.2021 ರಂದು ದಾಖಲಿಸಿದ ಪ್ರಥಮ ವರ್ತಮಾನ ವರದಿ ಯನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ನ್ಯಾಯಾಲಯದ ಮುದ್ದೆಮಾಲು ಹಾಗೂ ಹೇಳಿಕೆ ಭಾಗ, ಗಾಯದ ಪ್ರಮಾಣ ಪತ್ರಗಳಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನೆಂದು ಉತ್ತರಿಸುವಿರಿ ?

**1ನೇ ಆರೋಪಿಯ ಉತ್ತರ:-**

**2ನೇ ಆರೋಪಿಯ ಉತ್ತರ:-**

**3ನೇ ಆರೋಪಿಯ ಉತ್ತರ:-**

**4ನೇ ಆರೋಪಿಯ ಉತ್ತರ:-**

ಪ್ರ–18: ಈ ಬಗ್ಗೆ ನಿಮಗೆ ಹೆಚ್ಚಿಗೆ ಏನಾದರೂ ಹೇಳುವುದಿದೆಯೇ?

**1ನೇ ಆರೋಪಿಯ ಉತ್ತರ:–**

**2ನೇ ಆರೋಪಿಯ ಉತ್ತರ:–**

**3ನೇ ಆರೋಪಿಯ ಉತ್ತರ:–**

**4ನೇ ಆರೋಪಿಯ ಉತ್ತರ:–**

ಪ್ರ–19: ನಿಮ್ಮ ಪರ ಯಾವುದಾದರೂ ದಾಖಲಾತಿ ಇದೆಯೇ?

**1ನೇ ಆರೋಪಿಯ ಉತ್ತರ:–**

**2ನೇ ಆರೋಪಿಯ ಉತ್ತರ:–**

**3ನೇ ಆರೋಪಿಯ ಉತ್ತರ:–**

**4ನೇ ಆರೋಪಿಯ ಉತ್ತರ:–**

ಪ್ರ–20: ನಿಮ್ಮ ಪರ ಸಾಕ್ಷಿ ವಿಚಾರಣೆ ಇದೆಯೇ?

**1ನೇ ಆರೋಪಿಯ ಉತ್ತರ:–**

**2ನೇ ಆರೋಪಿಯ ಉತ್ತರ:–**

**3ನೇ ಆರೋಪಿಯ ಉತ್ತರ:–**

**4ನೇ ಆರೋಪಿಯ ಉತ್ತರ:–**

( ಅರೋಪಿಗಳಿಗೆ ವಿಚಾರಣೆಯನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅವರು ಬೆರಳಚ್ಚು ಮಾಡಿ ನಂತರ ತಿದ್ದುಪಡಿ ಮಾಡಿ ನನ್ನ ಸಹಿಯೊಂದಿಗೆ 16ನೇ ಮೇ –2025 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದೆ.)

**(ಶ್ರೀಮತಿ. ಚಂಪಾಶ್ರೀ ಆರ್.)**
**ವ್ಯವಹಾರ ನ್ಯಾಯಾಧೀಶರು,**
**ಮತ್ತು ಜೆ.ಎಂ.ಎಫ್.ಸಿ ಅರಕಲಗೂಡು.**